ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಮುಖ್ಯಮಂತ್ರಿಗಳೇ, ಸಚಿವರು ಹೊಸಬರು ಎಂದು ಅಧ್ಯಕ್ಷರೇ ಹೇಳುತ್ತಿದ್ದಾರೆ. ಅದಕ್ಕೆ ನೀವೇ ಏನಾದರೊಂದು ಉತ್ತರ ಕೊಡಿ. ಡ್ರಿಪ್ ಇರಿಗೇಷನ್ 100 ಪರ್ಸೆಂಟ್ ಕೋಲಾರ ಮತ್ತು ಬಿಜಾಪುರದಲ್ಲಿ ಮಾಡಿದ್ದೀರಿ. ಇಡೀ ರಾಜ್ಯದಲ್ಲಿ 75 ಪರ್ಸೆಂಟ್ ಮಾಡಿದ್ದೀರಿ. ಇದರಲ್ಲಿ ಒಂದು ಬಿಡಿಗಾಸು ಹಣವೂ ಬಿಡುಗಡೆಯಾಗಿಲ್ಲ. ಸಾವಿರಾರು ರೈತರು ಡ್ರಿಪ್ ಇರಿಗೇಷನ್ ಮಾಡಿಸಿಕೊಂಡಿದ್ದು, ಮಾಡಿದಂಥ ಆ ಕಂಪನಿಗಳವರು ಪ್ರತಿ ದಿವಸ ರೈತರ ಹತ್ತಿರದ ಸಾಲಗಾರರು ಬಂದ ಹಾಗೆ ಬರುತ್ತಿದ್ದಾರೆ. ಅವರು ಸಾಲಗಾರರು, ಸರ್ಕಾರದವರಾದ ನೀವು ಸಾಕ್ಷಿದಾರರು. ನಿಮ್ಮ ಸಾಕ್ಷಿಯನ್ನು ನೋಡಿಕೊಂಡು ಕಂಪನಿಗಳವರು ಸಾಲ ಕೊಟ್ಟರು. ಆದ್ದರಿಂದ ಸಾಕ್ಷಿದಾರರಾದ ನೀವಾದರೂ ಎದ್ದು ನಿಂತು ಇಷ್ಟು ದಿವಸದಲ್ಲಿ ಕೊಡುತ್ತೇವೆ ಎಂದು ನೇರವಾಗಿ ಹೇಳಿದರೆ ಒಳ್ಳೆಯದು ಎಂದು ಮಾನ್ಯ ಅಧ್ಯಕ್ಷರ ಮೂಲಕ ನಾನು ತಮ್ಮನ್ನು ಪ್ರಾರ್ಥನೆ ಮಾಡುತ್ತೇನೆ. ಹಳೆಯ ಬಾಕಿಯನ್ನು ಇಷ್ಟು ದಿವಸಗಳಲ್ಲಿ ಕೊಡುತ್ತೇವೆ. ಮುಂದೆ ಬರುವಂಥಾದ್ದಕ್ಕೂ ಇಷ್ಟು ದಿನಗಳಲ್ಲಿ ಹಣ ಕೊಡುತ್ತೇವೆ ಎಂದು ಹೇಳಿದರೆ ಸಾಕಾಗುತ್ತದೆ.

ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ್ : ಬಾಕಿ ಉಳಿದಂಥ ಹಣವನ್ನು ಕೊಡುತ್ತೇವೆ.

ಅಧ್ಯಕ್ಷರು : ಮಾನ್ಯ ಸಚಿವರು ಹೊಸದಾಗಿ ಬಂದಿದ್ದಾರೆ. ನೀವು ಹೇಳಿದುದನೆಲ್ಲಾ ಪರಿಶೀಲನೆ ಮಾಡಿ ಅವರು ಯೋಗ್ಯ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಕೆ. ಶ್ರೀನಿವಾಸಗೌಡ : ಮುಖ್ಯಮಂತ್ರಿಗಳು ಈ ಮನೆಯಲ್ಲಿರುವುದರಿಂದ ಕೇಳಿದೆ. ಏಕೆಂದರೆ ಇದು ಗಹನವಾದಂಥ ವಿಷಯ.

ಅಧ್ಯಕ್ಷರು : ಅವರಿಗೆ ಮಾಹಿತಿ ಬೇಕಲ್ಲವೇ? ಸಂಬಂಧಪಟ್ಟ ಸಚಿವರು ಕ್ರಮ ತೆಗೆದುಕೊಳ್ಳುತ್ತಾರೆ ಬಿಡಿ.

ರೈತರ ಟ್ರ್ಯಾಕ್ಟರ್‌ಗಳಿಗೆ ಇಂಧನ ಸಬ್ಸಿಡಿ ನೀಡುವ ಬಗ್ಗೆ

186 (916) ಶ್ರೀ ಪಾಟೀಲ್ ಬಿ.ಸಿ. (ಹಿರೇಕೆರೂರು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರಾವಳಿ ಪ್ರದೇಶದ ಮೀನುಗಾರರ ದೋಣಿಗಳಿಗೆ ಬಳಸುವ ಇಂಧನಕ್ಕೆ ಸಬ್ಸಿಡಿ ಕೊಡುತ್ತಿದ್ದು, ಅದೇ ರೀತಿ ರಾಜ್ಯದ ರೈತರ ಟ್ರ್ಯಾಕ್ಟರ್‌ಗೆ ಬಳಸುವ ಇಂಧನಕ್ಕೆ ಸಬ್ಸಿಡಿ ನೀಡುವ ಯೋಜನೆ ಸರ್ಕಾರದ ಮುಂದಿದೆಯೇ;

ಆ) ರಾಜ್ಯದ ರೈತರಿಗೆ ಸಣ್ಣ ಹಿಡುವಳಿ ಮತ್ತು ಅತೀ ಸಣ್ಣ ಹಿಡುವಳಿ ರೈತರೆಂದು ಗುರುತಿನ ಚೀಟಿ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಚಮತ್ಕಾರ ಹತ್ತಿ ಕಳಪೆ ಬೀಜದಿಂದ ಆದ ನಷ್ಟದ ಪರಿಹಾರ ಹಣವನ್ನು ಸಂಪೂರ್ಣವಾಗಿ ರೈತರಿಗೆ ಕೊಡಲಾಗಿದೆಯೇ;

ಈ) ಹಾಗಿದ್ದರೆ, ಎಷ್ಟು ಜನ ರೈತರಿಗೆ ಕೊಡಲಾಗಿದೆ ಹಾಗೂ ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಎಷ್ಟು ಜನ ರೈತರಿಗೆ ನಷ್ಟದ ಪರಿಹಾರ ಹಣವನ್ನು ಕೊಡಲಾಗಿದೆ?

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು) :

ಅ) ಇಲ್ಲ.

ಆ) ಇಲ್ಲ.

ಇ) ಮತ್ತು ಈ) ಹಾವೇರಿ ಜಿಲ್ಲೆಯಲ್ಲಿ 8915 ರೈತರಿಗೆ ಪರಿಹಾರ ನೀಡಬೇಕಾಗಿದ್ದು, ಈ ಪೈಕಿ 7906 ರೈತರಿಗೆ ಈಗಾಗಲೇ ಪರಿಹಾರ ವಿತರಿಸಲಾಗಿದೆ. ಇದೇ ರೀತಿ ಹಿರೇಕೆರೂರು ತಾಲ್ಲೂಕಿನ 336 ರೈತರಿಗೆ ಪರಿಹಾರದ ಹಣ ವಿತರಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ವಿಸ್ತರಣಾ ಶಿಕ್ಷಣ

185 (1000) ಶ್ರೀ ಕೃಷ್ಣಪಾಲೇಮಾರ್ (ಸೂರತ್‌ಕಲ್) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನ ಉಳ್ಳಾಲದಲ್ಲಿರುವ ವಿಸ್ತರಣಾ ಶಿಕ್ಷಣ ಘಟಕ (ಕೃಷಿ ಸಂಶೋಧನಾ ಕೇಂದ್ರ) ಕಾರ್ಯ ಚಟುವಟಿಕೆಗಳ ವಿವರಗಳೇನು;

ಆ) ಸದರಿ ಕೇಂದ್ರ ಉಪಯುಕ್ತತೆಯನ್ನು ಜಿಲ್ಲೆಯ ರೈತರು ಪಡೆದುಕೊಳ್ಳುತ್ತಿದ್ದು, ಅಗತ್ಯ ಸೇವೆಗಳು ಕೇಂದ್ರದಿಂದ ಸಲ್ಲುತ್ತಿದ್ದರೂ ಕೇಂದ್ರವನ್ನು ಸ್ಥಳಾಂತರಿಸುವ ವಿಚಾರ ಸರ್ಕಾರದ ಮುಂದಿರುವುದು ನಿಜವೇ; ಹಾಗಿದ್ದಲ್ಲಿ ಸ್ಥಳಾಂತರಕ್ಕೆ ಕಾರಣಗಳೇನು;

ಇ) ಜಿಲ್ಲೆಯ ರೈತರುಗಳ ಬೇಡಿಕೆ ಮತ್ತು ಹಿತಾಸಕ್ತಿಗಳನ್ನು ಗಮನಿಸಿ ಕೇಂದ್ರವನ್ನು ಸ್ಥಳಾಂತರಿಸದೇ ಇರಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನಲ್ಲಿರುವ ಕೃಷಿ ವಿಸ್ತರಣಾ ಶಿಕ್ಷಣ ಘಟಕದ ಕಾರ್ಯಚಟುವಟಿಕೆಗಳು ಕೆಳಗಿನಂತಿವೆ:

1. ರೈತರ ಜಮೀನಿನಲ್ಲಿ ಕ್ಷೇತ್ರ ಪ್ರಯೋಗಗಳನ್ನು ಏರ್ಪಡಿಸುವುದು.
2. ರೈತರ ಜಮೀನಿನಲ್ಲಿ ಅವರ ಖರ್ಚಿನಲ್ಲಿಯೇ ಪ್ರಥಮ ಹಂತದ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವುದು.
3. ರಾಜ್ಯ ಸರ್ಕಾರದ ವಿವಿಧ ಅಭಿವೃದ್ಧಿ ಇಲಾಖೆಗಳೊಡನೆ ಕಾರ್ಯಕ್ರಮಗಳನ್ನು ಆಯೋಜಿಸುವುದು.
4. ಸಮತೋಲನ ಕೃಷಿ ಕಾರ್ಯಕ್ರಮಗಳನ್ನು ಆಯೋಜಿಸುವುದು.
5. ಸಮಗ್ರ ಕೃಷಿ ಅಭಿವೃದ್ಧಿ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳುವುದು.
6. ವಿಸ್ತರಣಾ ಶಿಕ್ಷಣ ಚಟುವಟಿಕೆಗಳಾದ ತರಬೇತಿ, ಕ್ಷೇತ್ರ ಭೇಟಿ ಮತ್ತು ಕ್ಷೇತ್ರೋತ್ಸವ ಮುಂತಾದವುಗಳನ್ನು ವ್ಯವಸ್ಥೆಗೊಳಿಸುವುದು.

ಆ) ಹೌದು.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ 15 ಜಿಲ್ಲೆಗಳಲ್ಲಿ 11 ಜಿಲ್ಲೆಗಳಿಗೆ ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿಯವರಿಂದ ಕೃಷಿ ವಿಜ್ಞಾನ ಕೇಂದ್ರಗಳು ಮಂಜೂರಾಗಿದ್ದು, ಕಂಕನಾಡಿ ಕೃಷಿ ವಿಜ್ಞಾನ ಕೇಂದ್ರ ಸಹ ಇವುಗಳಲ್ಲಿ ಒಂದಾಗಿದೆ. ಈ ಸಂಸ್ಥೆಯು ಸೂರತ್‌ಕಲ್ ಸೇರಿದಂತೆ ಮಂಗಳೂರು ಜಿಲ್ಲೆಯ ಎಲ್ಲಾ ತಾಲ್ಲೂಕಿನ ರೈತರ ಸಮಸ್ಯೆಗಳಿಗೆ ಸ್ಪಂದಿಸುತ್ತಿದೆ. ಕೃಷಿ ವಿಜ್ಞಾನ ಕೇಂದ್ರ ಹಾಗೂ ವಿಸ್ತರಣಾ ಶಿಕ್ಷಣ ಘಟಕದ ಕಾರ್ಯಚಟುವಟಿಕೆಗಳು ಹೆಚ್ಚು ಕಡಿಮೆ ಒಂದೇ ಆಗಿದ್ದು ಅವೇ ಕೆಲಸಗಳ ಪುನರಾವರ್ತನೆಯಾದಂತಾಗುತ್ತದೆ. ಮೇಲಾಗಿ ಕೃಷಿ ವಿಜ್ಞಾನ ಕೇಂದ್ರಕ್ಕೆ ನವದೆಹಲಿಯ ಭಾರತೀಯ ಕೃಷಿ ಅನುಸಂಧಾನ ಪರಿಷತ್ ನೂರಕ್ಕೆ ನೂರರಷ್ಟು ಅನುದಾನವನ್ನು ನೀಡುತ್ತಿದೆ. ಆದರೆ ವಿಸ್ತರಣಾ ಶಿಕ್ಷಣ ಘಟಕ ಸಂಪೂರ್ಣವಾಗಿ ರಾಜ್ಯ ಸರ್ಕಾರದ ಅಲ್ಪ ಸ್ವಲ್ಪ ಅನುದಾನದ ಮೇಲೆ ಅವಲಂಬಿತವಾಗಿದೆ. ಇದಲ್ಲದೆ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ, ಕೊಡಗು, ದಾವಣಗೆರೆ, ಮೈಸೂರು ಹಾಗೂ ಬೆಂಗಳೂರು ನಗರ ಜಿಲ್ಲೆಗಳಲ್ಲಿ ಈ ಕೃಷಿ ವಿಜ್ಞಾನ ಕೇಂದ್ರಗಳನ್ನು ಹೊಂದಿಲ್ಲದಿರುವ ಕಾರಣ ಈ ವಿಸ್ತರಣಾ ಶಿಕ್ಷಣ ಘಟಕವನ್ನು ಈ ಮೇಲೆ ತಿಳಿಸಿದ ಯಾವುದಾದರೊಂದು ಜಿಲ್ಲೆಗೆ ಸ್ಥಳಾಂತರಿಸುವ ನಿರ್ಣಯ ತೆಗೆದುಕೊಳ್ಳಲಾಗಿದೆ.

ಇ) ಉದ್ಭವಿಸುವುದಿಲ್ಲ.

ಶ್ರೀ ಬಿ.ಸಿ. ಪಾಟೀಲ್ : ನಾನು ಕೇಳಿರುವಂಥ ಪ್ರಶ್ನೆ ರಾಜ್ಯಕ್ಕೆ, ದೇಶಕ್ಕೆ ಅನ್ನ ಕೊಡುವಂಥ ರೈತನ ಅಳಿವು, ಉಳಿವಿನ ಪ್ರಶ್ನೆ. ತಾವು ಅನುಮತಿ ಕೊಟ್ಟರೆ, ನಾನು ಕೇಳಿರುವ ಪ್ರಶ್ನೆಯನ್ನು ರಿಪೀಟ್ ಮಾಡುತ್ತೇನೆ. ಕರಾವಳಿ ಪ್ರದೇಶದ ಮೀನುಗಾರರ ದೋಣಿಗಳಿಗೆ ಬಳಸುವ ಇಂಧನಕ್ಕೆ ಸಬ್ಸಿಡಿ ಕೊಡುತ್ತಿದ್ದು, ಅದೇ ರೀತಿ ರಾಜ್ಯದ ರೈತರ ಟ್ರ್ಯಾಕ್ಟರ್‌ಗಳಿಗೆ ಬಳಸುವ ಇಂಧನಕ್ಕೆ ಸಬ್ಸಿಡಿ ನೀಡುವ ಯೋಜನೆ ಸರ್ಕಾರದ ಮುಂದಿದೆಯೇ ಎಂದು ನಾನು ಕೇಳಿರುವ ಪ್ರಶ್ನೆಗೆ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಇವತ್ತು ಡೀಸೆಲ್ ಬೆಲೆ 37 ರೂಪಾಯಿ 50 ಪೈಸೆ ಇದೆ. ರೈತರು ಟ್ರ್ಯಾಕ್ಟರ್‌ಗಳನ್ನು ತಮ್ಮ ಹೊಲಗಳನ್ನು ಉಳುಮೆ ಮಾಡಲಿಕ್ಕೆ, ಬಿತ್ತನೆ ಮಾಡಲಿಕ್ಕೆ ಉಪಯೋಗಿಸುತ್ತಾರೆ. ಡೀಸೆಲ್‌ಗೆ ಒಂದು ಲೀಟರ್‌ಗೆ ಮೂವತ್ತೇಳೂವರೆ ರೂಪಾಯಿಗಳನ್ನು ಕೊಟ್ಟು, ಭೂಮಿಯನ್ನು ಉಳುಮೆ ಮಾಡಿ, ಬೆಳೆಯನ್ನು ತೆಗೆದು ಬದುಕುವಂಥ ಪರಿಸ್ಥಿತಿ ಬಹಳ ಕಷ್ಟದಾಯಕವಾಗಿದೆ. ನಮ್ಮ ಕೃಷಿ ಸಚಿವರೂ ಕೂಡ ರೈತ ಕುಟುಂಬದಿಂದ ಬಂದಂಥವರು. ಈ ಪ್ರಶ್ನೆಗೆ ಬಹಳ ಸ್ಪಷ್ಟವಾಗಿ ಉತ್ತರವನ್ನು ಇಲ್ಲ ಎಂದು ಕೊಟ್ಟಿದ್ದಾರೆ. ಹೀಗಾದರೆ ರೈತರು ಎಲ್ಲಿಗೆ ಹೋಗಬೇಕು? ಮೀನುಗಾರರ ದೋಣಿಗಳಿಗೆ ಬಳಸುವ ಡೀಸೆಲ್‌ಗೆ ಸಬ್ಸಿಡಿ ಕೊಡುತ್ತೀರಿ. ಆದರೆ, ರೈತರು ಯಾವ ಪಾಪ ಮಾಡಿದ್ದಾರೆ ಎಂದು ನೀವು ರೈತರಿಗೆ ಸಬ್ಸಿಡಿ ಕೊಡುತ್ತಿಲ್ಲ. ಮೀನುಗಳನ್ನು ಹಿಡಿಯದಿದ್ದರೆ ದೇಶವೇನೂ ಮುಳುಗಿ ಹೋಗುವುದಿಲ್ಲ. ಮೀನುಗಳು ಇನ್ನೂ ಚೆನ್ನಾಗಿ ಬೆಳೆದು ಬಲಿಷ್ಠವಾಗುತ್ತವೆ. ಹಾಗೆಂದು, ಮೀನುಗಾರರಿಗೆ ಸಬ್ಸಿಡಿ ಕೊಡಬೇಡಿ ಎಂದು ನಾವು ಹೇಳುವುದಿಲ್ಲ. ಅದೇ ರೀತಿ ರೈತನಿಗೂ

ಕೊಡಿ ಎಂದು ಕೇಳುತ್ತಿದ್ದೇನೆ. ರೈತ ಏನು ತಪ್ಪು ಮಾಡಿದ್ದಾನೆ? "ಒಕ್ಕಲಿಗ ಒಕ್ಕದಿರೆ ಬಿಕ್ಕುವುದು ಜಗವೆಲ್ಲ" ಎಂದು ಸರ್ವಜ್ಞ ಹೇಳಿದ್ದಾನೆ. ರೈತ ಭೂಮಿಯನ್ನು ಉಳುಮೆ ಮಾಡದೇ ಹೋದರೆ, ಈ ದೇಶಕ್ಕೆ ಅನ್ನ ಸಿಗಲು ಸಾಧ್ಯವೇ ಇಲ್ಲ. ಇಂಥ ಸಂದರ್ಭದಲ್ಲಿ ಸರ್ಕಾರ ಈ ಬಗ್ಗೆ ನನ್ನ ಗಮನವನ್ನು ಹರಿಸಿ ರೈತರು ಉಪಯೋಗಿಸುವಂಥ ಟ್ರಾಕ್ಟರ್ ಮತ್ತು ಪಂಪುಸೆಟ್ಟುಗಳಿಗೆ ಬಳಸುವಂಥ ಡೀಸಲ್ ಮೇಲೆ ಸಬ್ಸಿಡಿಯನ್ನು ಕೊಡುವಂಥ ವಿಚಾರವನ್ನು ಸರ್ಕಾರ ಕೂಡಲೇ ಕೈಗೆತ್ತಿಕೊಂಡು, ಈ ಬಗ್ಗೆ ಕ್ರಮವನ್ನು ಜರುಗಿಸಬೇಕು ಮತ್ತು ಅದಕ್ಕೆ ಹಣಕಾಸಿನ ಮಂತ್ರಿಗಳು ಉದಾರವಾಗಿ ಹಣವನ್ನು ಕೊಡುವಂಥ ಕೆಲಸವನ್ನು ಮಾಡಬೇಕೆಂದು ಮಾನ್ಯ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಒಂದು ಪ್ರಶ್ನೆ ಕೇಳಿದಾಗ, ಅದಕ್ಕೆ ಪೂರಕವಾದ ಉಪ ಪ್ರಶ್ನೆಗಳು ಇವೆಯೇ, ಇಲ್ಲವೇ ಎನ್ನುವುದನ್ನು ನೋಡುವಂಥಾದ್ದನ್ನು ನಿಮ್ಮ ಕಛೇರಿಯಲ್ಲಿ ಮಾಡಬೇಕಲ್ಲವೇ? ಒಂದು ಪ್ರಶ್ನೆ, ಟ್ರಾಕ್ಟರ್‌ಗೆ ಬಳಸುವ ಡೀಸೆಲ್‌ಗೆ ಸಬ್ಸಿಡಿ ಕೊಡುತ್ತೀರಾ ಎಂದು ಇದ್ದರೆ, ಇನ್ನೊಂದು ಪ್ರಶ್ನೆ ಸಣ್ಣ ಹಿಡುವಳಿದಾರರಿಗೆ ಗುರುತಿನ ಚೀಟಿ ಕೊಡುತ್ತೀರಾ ಎಂದು ಇದೆ. ಮತ್ತೊಂದು ಪ್ರಶ್ನೆ ಚಮತ್ಕಾರ ಹತ್ತಿ ಕಳಪೆ ಬೀಜದ ಬಗ್ಗೆ ಇದೆ. ಹೀಗಾದರೆ ನಾವು ಅಸೆಂಬ್ಲಿಯಲ್ಲಿ ಕುಳಿತುಕೊಳ್ಳಲು ಆಗುತ್ತದೆಯೇ? ಒಂದೇ ಪ್ರಶ್ನೆಯ ಕೆಳಗೆ, ಬೇರೆ ಬೇರೆ ನಾಲ್ಕು ಪ್ರಶ್ನೆಗಳನ್ನು ತಾವು ಅಲೋ ಮಾಡಬಹುದೇ? ಪ್ರಶ್ನೆ ಓದಿನೋಡಿ. ಈ ರೀತಿಯ ಪ್ರಶ್ನೆಗಳನ್ನು ಅಸೆಂಬ್ಲಿಗೆ ತಂದು ಬಿಟ್ಟರೆ ಗತಿಯೇನು?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಎರಡು ಇಲಾಖೆಗೆ ಸಂಬಂಧಪಟ್ಟಂಥಾದ್ದನ್ನು ಒಂದೇ ಪ್ರಶ್ನೆಯಲ್ಲಿ ಹಾಕಿ ಕಳುಹಿಸಿದ್ದೀರಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಹಾಗಲ್ಲ. ಒಂದು ಪ್ರಶ್ನೆಗೆ ಪೂರಕವಾಗಿ ಉಪ ಪ್ರಶ್ನೆಗಳು ಬರಬೇಕು. ಆದರೆ ಪ್ರಶ್ನೆಗಳೇ ಬೇರೆ ಬೇರೆಯಾಗಿವೆ. ಒಬ್ಬರಿಗೆ ನಾಲ್ಕು ಪ್ರಶ್ನೆಗಳನ್ನು ಕೇಳಲು ನೀವು ಅವಕಾಶ ಮಾಡಿಕೊಡುವಿರಾ? ಇಷ್ಯೂಸೇ ಡಿಫರೆಂಟ್ ಆಗಿವೆ.

ಅಧ್ಯಕ್ಷರು : ಕೆಲವು ಸ್ಟಾರ್ಡ್ ಕ್ವೆಶ್ಚನ್‌ಗಳನ್ನು ಮಾಡುವಾಗ ಆ ರೀತಿಯ ಲೋಪಗಳಾಗಿರಬಹುದು.

ಶ್ರೀ ಜೆ.ಸಿ. ಮಾಧುಸ್ವಾಮಿ : ನಿಮ್ಮ ಆಫೀಸ್ ಏನು ಮಾಡುತ್ತಿದೆ ಸರ್?

ಅಧ್ಯಕ್ಷರು : ಅವರು ಅದನ್ನು ನನ್ನ ಗಮನಕ್ಕೆ ತಂದಠ ನಾನು ನೋಡಬಹುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮೂರು ಇಲಾಖೆಗೆ ಸಂಬಂಧಪಟ್ಟಂಥಾದ್ದನ್ನು ಒಂದೇ ಪ್ರಶ್ನೆಯಲ್ಲಿ ಕೇಳಿದರೆ ಹೇಗೆ?

ಶ್ರೀ ಜೆ.ಸಿ. ಮಾಧುಸ್ವಾಮಿ : ಮೂರು ಇಲಾಖೆಯಲ್ಲಿ, ಒಂದೇ ಇಲಾಖೆಯದ್ದೇ. ಆದರೆ ಸಂಬಂಧಪಡದ ಮೂರು ಮೂರು ಪ್ರಶ್ನೆಗಳನ್ನು ಒಟ್ಟಿಗೆ ಹಾಕಿಕೊಟ್ಟುಬಿಟ್ಟರೆ ಹೇಗೆ? ಒಂದು ಸಲ ಒಂದೇ ಇಲಾಖೆಯದು ನಾಲ್ಕು ಪ್ರಶ್ನೆ ಕೇಳುವುದಕ್ಕಾಗುವುದಿಲ್ಲ. ಒಂದೇ ಪ್ರಶ್ನೆ ಕೇಳಬೇಕು. ಅದು ಸಚಿವರ ತಪ್ಪಲ್ಲ, ಸಭಾಧ್ಯಕ್ಷರ ಆಫೀಸ್ ತಪ್ಪು ಅದು. ಟ್ರಾಕ್ಟರ್‌ಗೆ ಉಪಯೋಗಿಸುವ

ಡೀಸೆಲ್‌ಗೆ ಸಬ್ಸಿಡಿ ಕೊಡುತ್ತೀರಾ ಎಂದು ಪ್ರಶ್ನೆ ಕೇಳಿರುವುದು ಸರಿ. ಮುಂದೆ, ಅದಕ್ಕೆ ಪೂರಕವಾಗಿ ಪ್ರಶ್ನೆಗಳು ಬರಬೇಕಲ್ಲವೇ? ಅಲ್ಲಿಂದ, ಸಣ್ಣ ಹಿಡುವಳಿದಾರರ ಚೀಟಿಗೆ ಹೋಗುತ್ತೀರಿ. ಅಲ್ಲಿಂದ ಹತ್ತಿ ಬೀಜಕ್ಕೆ ಬರುತ್ತೀರಿ. ಅದನ್ನು ನಾವು ಇಲ್ಲಿ ಕುಳಿತುಕೊಂಡು ಫಾಲೋ ಮಾಡುವುದಕ್ಕಾಗುತ್ತದೆಯೇ?

ಅಧ್ಯಕ್ಷರು : ಕೆಲವು ತಪ್ಪುಗಳಾಗಿವೆ. ಸ್ಟಾರ್ಡ್ ಕ್ವೆಶ್ಚನ್ಸ್ ಮಾಡಿದಾಗ ಸರಿಯಾಗಿ ನೋಡದೇ ಪಟ್ಟಿ ಮಾಡಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಈಗ ಅವರು ಈ ಪ್ರಶ್ನೆಯನ್ನು ಒಂದು ಗಂಟೆ ಕೇಳಬಹುದು. ನಾಲ್ಕು ಪ್ರಶ್ನೆಗಳನ್ನು ಅಲೋ ಮಾಡಿದ ಹಾಗಾಗಿದೆ.

ಶ್ರೀ ಬಂಡೆಪ್ಪ ಕಾಶಂಪೂರ್ : ಅವರು ಕೇಳಿದ ಪ್ರಶ್ನೆಗೆ ಸ್ಪಷ್ಟವಾಗಿಯೇ ಉತ್ತರ ಕೊಟ್ಟಿದ್ದೇವೆ. ಇಲ್ಲ ಎಂದು ಹೇಳಿದ್ದೇವೆ. ಆ ರೀತಿ ಸಬ್ಸಿಡಿ ನೀಡುವ ಯೋಜನೆ ಸರ್ಕಾರದ ಮುಂದಿಲ್ಲದಿರುವುದರಿಂದ ಇಲ್ಲ ಎಂದು ಹೇಳಿದ್ದೇವೆ. ಯೋಜನೆ ಇದ್ದರೆ, ಕೊಡುತ್ತೇವೆ ಎಂದು ನಾವು ಹೇಳುತ್ತಿದ್ದೆವು. ಮುಂದಿನ ಪ್ರಶ್ನೆಗೆ ನೀಡಿರುವ ಉತ್ತರದಲ್ಲಿ ನಾವು ಸ್ಪಷ್ಟವಾಗಿ ಹೇಳಿದ್ದೇವೆ.

ಶ್ರೀ ಬಿ.ಸಿ. ಪಾಟೀಲ್ : ಇಲ್ಲಿರುವಂಥ ಬಹುತೇಕ ಸದಸ್ಯರು ರೈತ ಕುಟುಂಬದಿಂದ ಬಂದಂಥವರು. ಅನಾವಶ್ಯಕವಾದಂಥ ವಿಷಯಗಳ ಬಗ್ಗೆ ಇಲ್ಲಿ ಸಾಕಷ್ಟು ಚರ್ಚೆಗಳು ನಡೆಯುತ್ತವೆ. ರೈತರಿಗೆ ಅನುಕೂಲವಾಗುವ ಇದರ ಬಗ್ಗೆ ಸಾಕಷ್ಟು ದೀರ್ಘವಾಗಿ ಚರ್ಚೆ ನಡೆದು, ಇದಕ್ಕೆ ಪರಿಹಾರ ಕೊಡುವಂಥ ಒಂದು ವ್ಯವಸ್ಥೆಯಾಗಬೇಕು. ಸಚಿವರು ಎಷ್ಟು ಸುಲಭವಾಗಿ ಇಲ್ಲ ಎಂದು ಹೇಳಿಬಿಟ್ಟರು. ರಾಜ್ಯದ ರೈತರ ಬಗ್ಗೆ ಕಳಕಳಿಯನ್ನು ವ್ಯಕ್ತಪಡಿಸಿ, ರೈತರಿಗೆ ಪರಿಹಾರವನ್ನು ಕೊಡುವಂಥಾದ್ದು ಆಗಬೇಕು.

ಅಧ್ಯಕ್ಷರು : ಯೋಜನೆಗಳಿಲ್ಲ ಎಂದು ಅವರು ಹೇಳಿದ್ದಾರೆ. ಅದಕ್ಕೆ ಪೂರಕವಾಗಿ ಉಪ ಪ್ರಶ್ನೆಗಳನ್ನು ಕೇಳಿ.

ಶ್ರೀ ಬಿ.ಸಿ. ಪಾಟೀಲ್ : ಯೋಜನೆಗಳಿಲ್ಲ ಎಂದರೆ, ಮುಂದೆ ಏನು ಮಾಡುತ್ತಾರೆ ಎನ್ನುವುದಾದರೂ ಬೇಕಲ್ಲವೇ?

ಶ್ರೀ ಬಂಡೆಪ್ಪ ಕಾಶಂಪೂರ್ : ಈ ಸರ್ಕಾರ, ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ರೈತರ ಬಗ್ಗೆ ಬಹಳಷ್ಟು ಕಾಳಜಿ ವಹಿಸಿದ್ದು, ಬಹಳಷ್ಟು ಸ್ಕೀಂಗಳನ್ನು ಅನುಷ್ಠಾನ ಮಾಡುತ್ತಿದ್ದೇವೆ. ಇವರು ಕೇಳಿದಂಥ ಪ್ರಶ್ನೆಗೆ ಉತ್ತರವಾಗಿ ಸರ್ಕಾರದಲ್ಲಿ ಆ ಯೋಜನೆಯಿಲ್ಲ ಎಂದು ಹೇಳಿದ್ದೇವೆ. ಅದಕ್ಕೆ ಅವರು, ರೈತರ ಬಗ್ಗೆ ನನಗೆ ಕಾಳಜಿಯಿಲ್ಲ ಎಂದು ಹೇಳುತ್ತಿದ್ದಾರೆ. ಇಲ್ಲಿರುವಂಥ ಎಲ್ಲರೂ ರೈತರ ಬಗ್ಗೆ ಕಾಳಜಿಯನ್ನು ಇಟ್ಟುಕೊಂಡೇ ಇಲ್ಲಿಗೆ ಬಂದಿರುವುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವು, ಅವರು ಇಬ್ಬರೂ ಒಂದೇ ಪಕ್ಷದವರು. ಹೀಗಿರುವಾಗ, ರೈತರ ಬಗ್ಗೆ ಅವರಿಗೆ ಕಾಳಜಿ ಇರುವುದು ಹೇಗೆ? ನಿಮಗೆ ಕಾಳಜಿ ಇಲ್ಲದಿರುವುದು ಹೇಗೆ? ನಿಮ್ಮ

ಪರಿಸ್ಥಿತಿ ಏನು? ಅವರೂ ನಿಮ್ಮ ಪಕ್ಷ, ನೀವೂ ಅವರ ಪಕ್ಷ. ನಿಮಗೆ ರೈತರ ಬಗ್ಗೆ ಕಳಕಳಿಯಿಲ್ಲ ಎಂದು ನಿಮ್ಮ ಪಕ್ಷದವರೇ ಆಪಾದನೆ ಮಾಡುತ್ತಿದ್ದಾರೆ. ಈಗ ನಿಮ್ಮ ಪರಿಸ್ಥಿತಿ ಏನು? ನಿಮ್ಮ ಪಕ್ಷದ ಪರಿಸ್ಥಿತಿ ಏನು?

ಶ್ರೀ ಬಂಡೆಪ್ಪ ಕಾಶಂಪೂರ್ : ಆಪಾದನೆಯಲ್ಲ. ಕಳಕಳಿ ಇಲ್ಲ ಎಂದೇನೂ ಅಲ್ಲ. ಡೀಸೆಲ್ ಕೊಡುವ ಬಗ್ಗೆ ಅವರು ಹೇಳುತ್ತಿದ್ದಾರೆ.

ಶ್ರೀ ಬಿ.ಸಿ. ಪಾಟೀಲ್ : ಆಪಾದನೆಯಲ್ಲ ಇದು. ಇದು ರೈತರ ಬಗ್ಗೆ ನಿಷ್ಪಕ್ಷಪಾತವಾಗಿ ಚರ್ಚೆ ಮಾಡಬೇಕಾದಂಥ ವಿಷಯ.

ಶ್ರೀ ಬಂಡೆಪ್ಪ ಕಾಶಂಪೂರ್ : ಮಾನ್ಯ ಸದಸ್ಯರಿಗೆ ಒಂದು ಮಾತನ್ನು ಹೇಳಲು ಬಯಸುತ್ತೇನೆ. ಪ್ರತಿವರ್ಷ ಒಂದು ತಾಲ್ಲೂಕಿಗೆ 2–3 ಟ್ರಾಕ್ಟರ್‌ಗಳನ್ನು ಕೊಡುತ್ತಿದ್ದರೆ ಈ ವರ್ಷ 20 ಟ್ರಾಕ್ಟರ್‌ಗಳನ್ನು ಬಜೆಟ್‌ನಲ್ಲಿ ಕೊಟ್ಟಿದ್ದೇವೆ. ಅದಕ್ಕೆ ಬಹಳಷ್ಟು ಹೆಚ್ಚಿನ ಹಣವನ್ನು ಕೊಟ್ಟಿದ್ದೇವೆ. ಹಾಗಾಗಿ, ರೈತರಿಗೆ ಬಹಳಷ್ಟು ಸ್ಕೀಂಗಳನ್ನು ಕೊಟ್ಟಿದ್ದೇವೆ. ತಾವು ಕೇಳುತ್ತಿರುವಂಥಾದ್ದನ್ನು ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳಿಗೆ ಪ್ರಶ್ನೆ ಕೇಳಬೇಕಾಗಿತ್ತು. ಅದು ಅಪ್ಪಿತಪ್ಪಿ ನನ್ನ ಕಡೆಗೆ ಬಂದಿದೆ. ಮುಂದಿನ ದಿನಗಳಲ್ಲಿ ಇದರ ಬಗ್ಗೆ ಅವರನ್ನು ನೇರವಾಗಿ ಕೇಳಿ ಈ ಸಮಸ್ಯೆಯನ್ನು ಪರಿಹಾರ ಮಾಡುತ್ತೇವೆ.

ಒಬ್ಬ ಮಾನ್ಯ ಸದಸ್ಯರು : ಚಮತ್ಕಾರ ಕಳಪೆ ಹತ್ತಿ ಬೀಜದ ಬಗ್ಗೆ ಉತ್ತರ ಹೇಳಲಿಲ್ಲ.

ಶ್ರೀ ಬಂಡೆಪ್ಪ ಕಾಶಂಪೂರ್ : ಚಮತ್ಕಾರ ಕಳಪೆ ಬೀಜದ ವಿಷಯ ದೊಡ್ಡದಿದೆ. ಅದನ್ನು ಅವರು ಈಗ ಕೇಳಲೇ ಇಲ್ಲ. ಅವರು ಕೇಳಿದ ಪ್ರಶ್ನೆಗಳೇ ಬೇರೆ.

ಶ್ರೀ ಬಿ.ಸಿ. ಪಾಟೀಲ್ : ನನ್ನ ಪ್ರಶ್ನೆ ಪೂರ್ಣ ಮುಗಿಯಲೇ ಇಲ್ಲ. ಅಷ್ಟರಲ್ಲಿ ನೀವು ಮುಂದಕ್ಕೆ ಹೋದಿರಿ. ಪ್ರಶ್ನೆ ಕೇಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು : ಮಂತ್ರಿಗಳೇ, ಟ್ರಾಕ್ಟರ್‌ನ ಹಣ ಬಿಡುಗಡೆ ಮಾಡಿಲ್ಲ.

ಶ್ರೀ ಬಂಡೆಪ್ಪ ಕಾಶಂಪೂರ್ : ಇನ್ನೊಂದು ಮುಖ್ಯವಾದ ವಿಷಯವೆಂದರೆ, ಹಿಂದಿನ ಸರ್ಕಾರದಲ್ಲಿ ಚಮತ್ಕಾರ ಹತ್ತಿ ಬೀಜದ ಕಂಪನಿಗಳನ್ನು ಕರೆಸಿ, ರೈತರಿಗೆ ಕಾಂಪನ್‌ಸೇಷನ್ ಕೊಡಬೇಕು ಎನ್ನುವ ನಿಟ್ಟಿನಲ್ಲಿ 2500 ರೂಪಾಯಿಗಳಂತೆ ಫಿಕ್ಸ್ ಮಾಡಿ, 1250 ರೂಪಾಯಿಗಳನ್ನು ಎಲ್ಲರಿಗೂ ವಿತರಣೆ ಮಾಡಲಾಗಿದೆ. ಆದರೆ ನಾವು ಬಂದ ಮೇಲೆ 20ನೇ ತಾರೀಖಿನಂದು, ಆ ಕಂಪನಿಯವರನ್ನು ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವರನ್ನು ಮತ್ತು ಅಲ್ಲಿನ ಎಂ.ಎಲ್.ಎ. ಗಳನ್ನು ಕರೆಸಿ ಮತ್ತೆ ಇದರ ಬಗ್ಗೆ ಚರ್ಚೆ ಮಾಡಿ, ಅದರ ಪ್ರೊಸೀಡಿಂಗ್ಸ್ ಮಾಡಿ, ಅದನ್ನು ಆ ಕಂಪನಿಯವರಿಗೆ ಕಳುಹಿಸಿದ್ದೇವೆ. ಬಾಕಿ ಉಳಿದಿರುವಂಥ ಮುಂದಿನ ಕಂತು ಏನಿದೆ ಅದನ್ನು ನಾವು ಶೀಘ್ರದಲ್ಲೇ ಪರಿಶೀಲನೆ ಮಾಡಿ ಕೊಡುತ್ತೇವೆ. ಆದ್ದರಿಂದ ನಾವು ಕೇಳುತ್ತಿದ್ದೇವೆ. ಈಗ ಏನು ಮಾಹಿತಿ ಕೊಟ್ಟಿದ್ದಾರೆ ಅದು ಅಷ್ಟು ಸಮಂಜಸವಾದ ಮಾಹಿತಿ ಅಲ್ಲ. ನಮ್ಮ ಹಿರೇಕೆರೂರು ತಾಲ್ಲೂಕಿಗೆ ಬರಬೇಕಾದ 6 ಲಕ್ಷದ 22

ಸಾವಿರ ರೂಪಾಯಿಗಳನ್ನು ತಕ್ಷಣ ಬಿಡುಗಡೆ ಮಾಡಬೇಕು. ಎರಡನೇ ಪ್ರಶ್ನೆಯಲ್ಲಿ ಗುರುತಿನ ಚೀಟಿ ಬಗ್ಗೆ ಕೇಳಿದ್ದೆ. ನಮ್ಮ ರೈತರು ಇವತ್ತು ಗುರುತಿನ ಚೀಟಿ ಇಟ್ಟುಕೊಳ್ಳಬಾರದೇ? ನಮ್ಮ ರೈತರು ಕೂಡ ಹೆಮ್ಮೆಯಿಂದ ಎದೆಯುಬ್ಬಿಸಿ ನಾನೊಬ್ಬ ರೈತ ಎಂದು ಗುರುತಿನ ಚೀಟಿ ಇಟ್ಟುಕೊಂಡು ಹೋಗುವುದರಲ್ಲಿ ತಪ್ಪೇನಿದೆ? ಅವನಿಗೆ ಮೊದಲು ಗುರುತಿನ ಚೀಟಿಯನ್ನು ಕೊಟ್ಟರೆ, ಆ ಗುರುತಿನ ಚೀಟಿಯಲ್ಲಿ ಅವನಿಗೆ ಎಷ್ಟು ಎಕರೆ ಭೂಮಿ ಇದೆ, ಯಾವ ಊರಿನ ರೈತ ಇತ್ಯಾದಿ ಅದರಲ್ಲಿ ನಮೂದಾಗುತ್ತದೆ. ಅಂಥದ್ದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತಿದೆ?

ಶ್ರೀ ಬಂಡೆಪ್ಪ ಕಾಶಂಪೂರ್ : ಮಾನ್ಯ ಅಧ್ಯಕ್ಷರೆ, ಹಾವೇರಿ ಜಿಲ್ಲೆ ಅವರ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ನಾನು ಮಂತ್ರಿಯಾಗಿ ಬಂದ ಮೇಲೆ, ಒಂದೇ ಒಂದು ಪ್ರಶ್ನೆ ಬಂದಿತ್ತು. ಇನ್ನೂ ಒಂದು ಕಂತು ನಮಗೆ ಕೊಡುವುದಿದೆ ಎಂದು ಹೇಳಿ, ಅದಕ್ಕೆ ಆ ಸಂಬಂಧಪಟ್ಟಂಥ ಜಿಲ್ಲಾ ಉಸ್ತುವಾರಿ ಮಂತ್ರಿಯವರಿಗೆ, ಆಮೇಲೆ ಎಂಎಲ್ಎ ರವರಿಗೆಲ್ಲ ಕರೆದು ಮಾತನಾಡಿದ್ದೇನೆ. ಅದರ ಬಗ್ಗೆ ಯಾವುದಾದರೂ ಪೆಂಡಿಂಗ್ ಇದ್ದರೆ, ನನ್ನ ಗಮನಕ್ಕೆ ತಂದರೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ. ಆ ಮೇಲೆ ಅವರು ಸಣ್ಣ ಹಿಡುವಳಿದಾರರಿಗೆ ಗುರುತಿನ ಚೀಟಿ ಕೊಡಬೇಕೆಂದು ಹೇಳಿದರು. ಈ ವರ್ಷ ಬಜೆಟ್‌ನಲ್ಲಿ soil health card ಅಂದರೆ ಮಣ್ಣಿನ ಆರೋಗ್ಯ ಕಾರ್ಡ್ ಏನಿದೆ ಅದನ್ನು ಕೊಡಬೇಕೆಂಬ ಯೋಜನೆಯನ್ನು ನಾವು ಹಾಕಿಕೊಂಡಿದ್ದೇವೆ. ಅದರ ಮುಖಾಂತರ ಇಡೀ ರಾಜ್ಯದಲ್ಲಿ 27 ಸಾವಿರದ ಹಳ್ಳಿಗಳು ಏನಿವೆ, ಅದರಲ್ಲಿ ಈ ವರ್ಷ 9 ಸಾವಿರ ಹಳ್ಳಿಗಳನ್ನು ಆ ಒಂದು scheme ನಲ್ಲಿ ತೆಗೆದುಕೊಂಡು ಬರುತ್ತಿದ್ದೇವೆ. Soil health card, ಆ ಒಂದು ಗುರುತಿನ ಚೀಟಿ ಏನಿದೆ, ನಾವು ವ್ಯಾಪಕವಾಗಿ ಇಡೀ ರಾಜ್ಯಾದ್ಯಂತ ಮಾಡಬೇಕೆಂಬ ಯೋಜನೆ ಇಷ್ಟರಲ್ಲಿಯೇ ಮಾಡುತ್ತಿದ್ದೇವೆಂದು ಸನ್ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಬಿ.ಸಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು : ಮಾನ್ಯ ಪಾಟೀಲರೆ, ಕುಳಿತುಕೊಳ್ಳಿ. ಎಷ್ಟು ಸಲ ಪ್ರಶ್ನೆ ಕೇಳುವುದು. No. No. ಎರಡು ಪ್ರಶ್ನೆಗಳನ್ನು ಕೇಳಿ ಎಂದು ಹೇಳಿದರೆ, ನೀವು ಎದ್ದು ನಿಂತು ಕೇಳುತ್ತಲೇ ಇದ್ದರೆ ಹೇಗೆ?

(ಅಡಚಣೆ)

ಶ್ರೀ ಬಿ.ಸಿ. ಪಾಟೀಲ್ : ಮಾನ್ಯ ಕೃಷಿ ಸಚಿವರು ಉತ್ತರ ಕೊಟ್ಟರು. ಇದನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಅಥವಾ ಉಪ ಮುಖ್ಯಮಂತ್ರಿಗಳಿಗೆ ಕೇಳಬೇಕಾಗಿತ್ತು. ದಯಮಾಡಿ ಅವಕಾಶ ಕೊಡಿ.

(ಅಡಚಣೆ)

ಅಧ್ಯಕ್ಷರು : ನೀವಿಬ್ಬರು ಹೊರಗಡೆ ಹೋಗಿ ಮಾತನಾಡಿಕೊಳ್ಳಿ. ದಯಮಾಡಿ ಎಂದು ಹೇಳುತ್ತೀರಿ. ಎಷ್ಟು ಸಲ ಹೇಳಿದರೂ ನಿಮಗೆಲ್ಲ ಅರ್ಥವಾಗುವುದಿಲ್ಲ.

ಶ್ರೀ ಬಿ.ಸಿ. ಪಾಟೀಲ್ : ಈಗ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿಯೇ ಇದ್ದಾರೆ. ಈ ಪ್ರಶ್ನೆ ಅವರ ಗಮನಕ್ಕೆ ಸಹ ಬಂದಿದೆ. ಇದರ ಬಗ್ಗೆ ಅವರ ಅಭಿಪ್ರಾಯವೇನಿದೆ ಎಂಬುದನ್ನು ಹೇಳಿದರೆ ಸೂಕ್ತವಲ್ಲವೇ? ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಬೆಳ್ತಂಗಡಿಯ ತೋಟಗಾರಿಕಾ ಇಲಾಖೆಯ ಆದಾಯ

187 (996) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿರುವ ತೋಟಗಾರಿಕೆ ಇಲಾಖೆಯ ಸ್ವಾಧೀನದಲ್ಲಿರುವ ಜಮೀನಿನ ಒಟ್ಟು ವಿಸ್ತೀರ್ಣ ಎಷ್ಟು; ಅದರಿಂದ ಬರುತ್ತಿರುವ ವಾರ್ಷಿಕ ಆದಾಯ ಎಷ್ಟು;

ಆ) ಇಲಾಖೆಯ ವ್ಯಾಪ್ತಿಯಲ್ಲಿರುವ ಜಮೀನಿನಲ್ಲಿ ಇನ್ನೂ ಹೆಚ್ಚು ಆದಾಯ ಗಳಿಸಲು ಹಾಗೂ ಸಾರ್ವಜನಿಕರಿಗೆ ಹೆಚ್ಚಿನ ಉಪಯುಕ್ತತೆಗಳನ್ನು ಒದಗಿಸಿಕೊಡಲು ಸರಕಾರ ಕ್ರಮ ಜರುಗಿಸುವುದೇ?

ಶ್ರೀ ಶಶಿಕಾಂತ ಅಕ್ಕಪ್ಪ ನಾಯ್ಕ (ತೋಟಗಾರಿಕೆ ಸಚಿವರು) :

ಅ) ಬೆಳ್ತಂಗಡಿ ತಾಲ್ಲೂಕಿನ ತೋಟಗಾರಿಕೆ ಇಲಾಖೆಯ ಸ್ವಾಧೀನದಲ್ಲಿ 314.00 ಎಕರೆ ಪ್ರದೇಶವಿದೆ. ವಿವರಗಳು ಕೆಳಕಂಡಂತಿವೆ.

1.	ಚಾರ್ಮಾಡಿ ತೋಟಗಾರಿಕೆ ಕ್ಷೇತ್ರ	:	195.20 ಎಕರೆ
2.	ಮದ್ದಡ್ಕ ತೋಟಗಾರಿಕೆ ಕ್ಷೇತ್ರ	:	115.00 ಎಕರೆ
3.	ಕಛೇರಿ ಸಸ್ಯಾಗಾರ, ಬೆಳ್ತಂಗಡಿ	:	3.20 ಎಕರೆ
	ಒಟ್ಟು	:	**314.00 ಎಕರೆ**

ಇವುಗಳಿಂದ ವಾರ್ಷಿಕ ಆದಾಯ ರೂ. 15.04 ಲಕ್ಷಗಳು ಬರುತ್ತಿದೆ (2005–06).

ಆ) ಹೌದು.

ಇಲಾಖೆಯ ವ್ಯಾಪ್ತಿಯಲ್ಲಿರುವ ಜಮೀನಿನಲ್ಲಿ ಇನ್ನೂ ಹೆಚ್ಚು ಆದಾಯ ಗಳಿಸಲು ಹಾಗೂ ಸಾರ್ವಜನಿಕರಿಗೆ ಹೆಚ್ಚಿನ ಉಪಯುಕ್ತತೆಗಳನ್ನು ಒದಗಿಸಿಕೊಡಲು ಸರ್ಕಾರವು ಈ ಕೆಳಕಂಡಂತೆ ಕ್ರಮ ಕೈಗೊಂಡಿದೆ.

1. ಸಸ್ಯೋತ್ಪಾದನೆ ಹೆಚ್ಚಿಸಲು ಅಗತ್ಯವಾದ ಮೂಲಭೂತ ಸೌಕರ್ಯಗಳಾದ ಪಾಲಿ ಹೌಸ್, ನೆರಳು ಚಪ್ಪರ, ಕೊಳವೆಬಾವಿ, ನೀರಿನ ತೊಟ್ಟಿಗಳ ನಿರ್ಮಾಣ, ಪೈಪ್‌ಲೈನ್ ಅಳವಡಿಕೆ, ಗ್ರೌಂಡ್ ನರ್ಸರಿ ಅಭಿವೃದ್ಧಿ, ಇತ್ಯಾದಿಗಳನ್ನು ನಿರ್ಮಿಸಲಾಗುತ್ತಿದೆ. ಇದರಿಂದ ಹೆಚ್ಚಿನ ಸಸ್ಯೋತ್ಪಾದನೆ ಮಾಡಿ ರೈತರ ಬೇಡಿಕೆಯನ್ನು ಪೂರೈಸಲಾಗುತ್ತಿದೆ.